ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

633(925) ಶ್ರೀ ಶ್ರೀರಾಮರೆಡ್ಡಿ ಜಿ.ಎ. (ಬಾಗೇಪಲ್ಲಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉ ರಿಸುವರೆ?

ಅ) ಬೆಳೆ ವಿಮೆ ಯೋಜನೆಯಡಿ ೨ ಥಮಿಕ ಇಳುವರಿಯಲ್ಲಿ ಸಾಲ ಪಡೆದ ರೈತರಿಗೆ ಮತ್ತು ಸಾಲ ಪಡೆಯದ ರೈತ ' ವ್ಯತ್ಯಾಸವೇನು;

ಆ) ಇದ್ದಲ್ಲಿ, ಸರ್ಕಾರ ಈ ಕ್ರಮ ಅನುಸರಿಸಲು ಕಾರಣವೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಏನು ಇಲ್ಲ. ಆದರೆ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತನಿಖೆ ಒಳಪಡಿಸುವ ಜಿಲ್ಲೆಗಳಲ್ಲಿ ತನಿಖೆಯನ್ವಯ ಬೇರೆ ಬೇರೆ ಕಡಿತದ (Reduction factor) ಪ್ರಮಾಣ ಜಾರಿಗೊಳಿಸುತ್ತದೆ.

ಆ) ಅನ್ವಯಿಸುವುದಿಲ್ಲ.

634(928) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂತರ್ಜಲ ಮಟ್ಟ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಕಡಿಮೆ ನೀರು ಬಳಕೆಯಾಗುವ ತೋಟಗಾರಿಕಾ ಬೆಳೆಗಳನ್ನು ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು)

ಅ) ಹೌದು.

ಆ) ಅಂತರ್ಜಲ ಮಟ್ಟವು ಕ್ಷೀಣಿಸುತ್ತಿರುವ ಅಂಶವನ್ನು ತೋಟಗಾರಿಕೆ ಇಲಾಖೆಯು ಗಮನಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ವಿಶೇಷವಾಗಿ ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ಒಳ ತೋಟಗಾರಿಕೆಯನ್ನು ಪ್ರಚಾರಪಡಿಸಲಾಗುತ್ತಿದೆ. ಮಳೆ ಆಶ್ರಯದಲ್ಲಿ ಬೆಳೆಯಬಹುದಾದಂತಹ ಮಾವು, ಗೋಡಂಬಿ, ಹಲಸು, ಹುಣಸೆ, ಸಪೋಟ, ಸೀಬೆ, ನೇರಳೆ, ಪನ್ನೇರಳೆ, ಬೆಲ, ಇತ್ಯಾದಿ ತೋಟಗಾರಿಕೆ ಬೆಳೆಗಳು ಕಸಿ / ಸಸಿಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

2. ಲಭ್ಯವಿರುವ ನೀರನ್ನು ಮಿತವ್ಯಯವಾಗಿ ಬಳಸಲು ರೈತರಿಗೆ ಹನಿ ನೀರಾವರಿ ಅಳವಡಿಸುವಂತೆ ತಿಳಿಸಲಾಗುತ್ತಿದೆ. ಇದಕ್ಕಾಗಿ ರೈತರು ಅಳವಡಿಸುವ ಹನಿ ನೀರಾವರಿ ಉಪಕರಣದ ಮೇಲೆ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಶೇ.100ರಷ್ಟು ಸಬ್ಸಿಡಿಯನ್ನು ಮತ್ತು ಇತರೆ ಜಿಲ್ಲೆಗಳಲ್ಲಿ ಶೇ. 50ರಷ್ಟು ಸಬ್ಸಿಡಿಯನ್ನು ರೈತರಿಗೆ ನೀಡಲಾಗುತ್ತಿದೆ. ಗಂಗಾಕಲ್ಯಾನ ಯೋಜನೆ ಫಲಾನುಭವಿಗಳಿಗೆ ಎಲ್ಲಾ ಜಿಲ್ಲೆಗಳಲ್ಲಿ ಶೇ. 100 ರಷ್ಟು ಸಹಾಯಧನ ನೀಡಲಾಗುತ್ತಿದೆ.
3. ಭೂಮಿಯಲ್ಲಿರುವ ನೀರಿನ ಅಂಶವನ್ನು ಹೆಚ್ಚು ದಿನಗಳವರೆಗೆ ಇರುವಂತೆ ಮಾಡಲು ಮಣ್ಣಿಗೆ Water absorbent gel ಅನ್ನು ಮಿಶ್ರಣ ಮಾಡಲು ರೈತರಿಗೆ ತಿಳುವಳಿಕೆ ನೀಡಲಾಗಿರುತ್ತದೆ. ತೀವ್ರ ಬರಪೀಡಿತ ಜಿಲ್ಲೆಗಳಾದ ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಪ್ರತಿ ರೈತರಿಗೆ ಉಚಿತವಾಗಿ ನೀಡಲಾಗುತ್ತಿದೆ.
4. ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಬುಡದ ಮಣ್ಣಿನಲ್ಲಿರುವ ನೀರಿನ ಅಂಶವನ್ನು ಆವಿಯಾಗಿ ಹಾಳಾಗದಂತೆ ತಡೆಗಟ್ಟಲು ಕಪ್ಪು ಪ್ಲಾಸ್ಟಿಕ್ ಹಾಳೆಗಳನ್ನು ಶೇ. 25ರ ಸಬ್ಸಿಡಿಯಲ್ಲಿ ರೈತರಿಗೆ ನೀಡಲಾಗುತ್ತಿದೆ.
5. ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ತೊರೆಗಳು, ಹಳ್ಳಗಳು, ಝರಿಗಳಿಗೆ (check dam)ಗಳನ್ನು ನಿರ್ಮಿಸಿ ಅಲ್ಲಿ ನೀರು ಸಂಗ್ರಹವಾಗುಂತೆ ಮಾಡಿ ತನ್ಮೂಲಕ ಅಂತರ್ಜಲ ಮರುಪೂರಣ ಆಗಲು ಕ್ರಮ ಏರ್ಪಡಿಸಲಾಗಿದೆ.
6. ಇದೇ ಯೋಜನೆ ಅಡಿಯಲ್ಲಿ ರೈತರ ಹೊಲಗಳಲ್ಲಿ ಸಮಪಾತಳಿ ಬದುಗಳು, ಸೆಕ್ಷನ್ ಬದುಗಳು, ಕ್ಯಾಚ್ ಪಿಟ್ಟುಗಳು, ಇತ್ಯಾದಿಗಳನ್ನು ರಚಿಸಿ ಮಳೆ ನೀರು ಅಲ್ಲೆ ಇಂಗುವಂತೆ ಮಾಡಿ ಅಂತರ್ಜಲ ಮರು ಪೂರಣಕ್ಕೆ ಅನುವು ಮಾಡಿ ಕೊಡಲಾಗುತ್ತಿದೆ.
7. ಬರಗಾಲ ಪೀಡಿತ ಪ್ರದೇಶಗಳಲ್ಲಿ ಬೀಳುವ ಮಳೆಯ ಪ್ರತಿ ಹನಿ ನೀರನ್ನು ಸಂಗ್ರಹ ಮಾಡಿಟ್ಟುಕೊಂಡು ನಂತರದಲ್ಲಿ ಉಪಯೋಗಿಸಿಕೊಳ್ಳಲು ರೈತರು ಅವರ ತೋಟಗಳಲ್ಲಿ ತೆಗೆಯುವ ಕೃಷಿ ಹೊಂಡಗಳಿಗೆ ಶೇ. 50 ಸಬ್ಸಿಡಿಯನ್ನು ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ನೀಡಲಾಗುತ್ತಿದೆ.

635(948) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚೆಗೆ ಅನರ್ಹರಿಗೆ ನೀಡಿರುವ ಪಡಿತರ ಚೀಟಿಗಳನ್ನು ಕಡತಗೊಳಿಸುವ ನೆಪದಲ್ಲಿ ಅರ್ಹ ಬಡವರ ಪಡಿತರ ಚೀಟಿಗಳನ್ನು ವಜಾಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;